ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ,ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೊ&ಫ/2018-19 ದಿನಾಂಕ: 04.12.2018.

**ಸು ತ್ತೋ ಲೆ**

**ವಿಷಯ:** ಮಾರ್ಚ್ 2019 ರಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿತ (Repeater) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೊ&ಫ/ಜು-18/ 2018-19 ದಿನಾಂಕ: 02.08.2018.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೊ&ಫ/ಜು-18/ 2018-19 ದಿನಾಂಕ: 14.09.2018.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೊ&ಫ/ಜು-18/ 2018-19 ದಿನಾಂಕ: 04.10.2018.
4. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೊ&ಫ/ಜು-18/ 2018-19 ದಿನಾಂಕ: 23.10.2018.
5. ಈ ಕಛೇರಿಯ ಸುತ್ತೋಲೆ ಸಂಖ್ಯೆ ಪಪೂಶಿಇ/ಪರೀಕ್ಷೆ/ನೊ&ಫ/ಜು-18/ 2018-19 ದಿನಾಂಕ: 13.11.2018.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಾರ್ಚ್ 2019 ರಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಪುನರಾವರ್ತಿತ (Repeater) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಸಂದಾಯ ಮಾಡಲು ಉಲ್ಲೇಖ 1ರನ್ವಯ ದಂಡ ಶುಲ್ಕವಿಲ್ಲದೆ ದಿನಾಂಕ 30.08.2018 ಹಾಗೂ ದಂಡ ಸಹಿತ ಶುಲ್ಕದೊಂದಿಗೆ 11.09.2018 ಕೊನೆಯ ದಿನಾಂಕವಾಗಿ ನಿಗದಿಪಡಿಸಲಾಗಿತ್ತು. ವಿದ್ಯಾರ್ಥಿಗಳ ಹಾಗೂ ಪೋಷಕರ ಮನವಿ ಮೇರೆಗೆ ಉಲ್ಲೇಖ 2, 3, 4 ಮತ್ತು 5ರಲ್ಲಿ ಪರೀಕ್ಷಾ ಶುಲ್ಕ ಸಂದಾಯ ಮಾಡಲು ದಿನಾಂಕಗಳನ್ನು ವಿಸ್ತರಿಸಲಾಗಿತ್ತು. ಮಾರ್ಚ್ 2019ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗೆ ಅರ್ಜಿ ಸಲ್ಲಿಸಲು / ಪರೀಕ್ಷಾ ಶುಲ್ಕ ಸಂದಾಯ ಮಾಡಲು **ಮತ್ತೊಮ್ಮೆ ಅಂತಿಮವಾಗಿ** ಹೆಚ್ಚುವರಿ ವಿಶೇಷ ದಂಡ ಶುಲ್ಕದೊಂದಿಗೆ ಕಡೇ ದಿನಾಂಕವನ್ನು ಈ ಕೆಳಗಿನಂತೆ ವಿಸ್ತರಿಸಲಾಗಿದೆ.

| ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ವಿಸ್ತರಿಸಲಾದ ಕಡೇ ದಿನಾಂಕ | ಕಾಲೇಜಿನವರು ವಿಸ್ತರಿಸಲಾದ ದಿನಾಂಕಗಳಲ್ಲಿ ಸ್ವೀಕರಿಸಿದ ಪರೀಕ್ಷಾ ಶುಲ್ಕವನ್ನು ಖಜಾನೆಗೆ ಸಂದಾಯ ಮಾಡಬೇಕಾದ ದಿನಾಂಕ | ಕಾಲೇಜಿನವರು ಪರೀಕ್ಷಾ ಅರ್ಜಿಗಳನ್ನು ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ತಲುಪಿಸುವ ದಿನಾಂಕ |
|---|---|---|
| **10-12-2018** | **12-12-2018** | **13-12-2018** |

**ಅರ್ಜಿ ಸ್ವೀಕರಿಸಲು ವಿಸ್ತರಿಸಲಾದ ವಿಸ್ತೃತ ದಿನಾಂಕಗಳಲ್ಲಿ ಸ್ವೀಕರಿಸಿ ಪಾವತಿಸಬೇಕಾದ ಶುಲ್ಕ ವಿವರ**

| ಇಲಾಖಾ ಸಮಸಂಖ್ಯೆ ಮೂಲ ಸುತ್ತೋಲೆ ದಿನಾಂಕ 02.08.2018 ರನ್ವಯ | ಸುತ್ತೋಲೆಯಲ್ಲಿ ವಿವರಿಸಿದಂತೆ ಶುಲ್ಕ |
|---|---|
| ಸರ್ಕಾರದ ಆದೇಶ ಸಂಖ್ಯೆ:ಇಡಿ 195 ಡಿಜಿಡಿ 2017, ಬೆಂಗಳೂರು ದಿನಾಂಕ:20.03.2018 ರನ್ವಯ ವಿಸ್ತರಿಸಿದ ದಿನಾಂಕಕ್ಕೆ ದಂಡ ಶುಲ್ಕ ಈ ಕಛೇರಿಯ ಉಲ್ಲೇಖ 1,2,3,4 ಮತ್ತು 5ರ ಪತ್ರಗಳಲ್ಲಿ ತಿಳಿಸಿರುವ ದಂಡ ಶುಲ್ಕ, ವಿಶೇಷ ದಂಡ ಶುಲ್ಕ, ಹೆಚ್ಚುವರಿ ವಿಶೇಷ ದಂಡ ಶುಲ್ಕದ ಮೊತ್ತ | ರೂ 3,820/- |
| ಸರ್ಕಾರದ ಆದೇಶ ಸಂಖ್ಯೆ:ಇಡಿ 195 ಡಿಜಿಡಿ 2017, ಬೆಂಗಳೂರು ದಿನಾಂಕ:20.03.2018 ರನ್ವಯ ವಿಸ್ತರಿಸಿದ ದಿನಾಂಕಕ್ಕೆ ದಂಡ ಶುಲ್ಕ ಪ್ರಸ್ತುತ ವಿಸ್ತರಿಸಿದ ದಿನಾಂಕ 05-12-2018 ರಿಂದ 10-12-2018 | ದಿನವೊಂದಕ್ಕೆ ರೂ. 100/- ರಂತೆ |

ಸದರಿ ಪರೀಕ್ಷೆಗಳಿಗೆ ಪುನರಾವರ್ತಿತ **(Repeater) ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಲು ಇದೇ ಅಂತಿಮ ಅವಕಾಶವಾಗಿರುತ್ತದೆ.** ಆದಕಾರಣ ಮೇಲೆ ತಿಳಿಸಿರುವ ದಿನಾಂಕದ ನಂತರ ಕಾಲೇಜಿನ ಪ್ರಾಂಶುಪಾಲರು ಯಾವುದೇ ಪುನರಾವರ್ತಿತ ಅಭ್ಯರ್ಥಿಗಳ ಅರ್ಜಿಗಳನ್ನು ಸ್ವೀಕರಿಸಕೂಡದು. ಪರೀಕ್ಷಾ ಶುಲ್ಕ ಪಾವತಿಸುವ ದಿನಾಂಕವನ್ನು ಮತ್ತೊಮ್ಮೆ ವಿಸ್ತರಿಸಲಾಗುವುದಿಲ್ಲ.

ಜಿಲ್ಲಾ ಉಪನಿರ್ದೇಶಕರು ಪುನರಾವರ್ತಿತ (Repeater) ವಿದ್ಯಾರ್ಥಿಗಳ ಅರ್ಜಿಗಳನ್ನು ಮುದ್ದಾಗಿ ದಿನಾಂಕ **15.12.2018** ರಂದು ಕೇಂದ್ರ ಕಛೇರಿಗೆ ಸಲ್ಲಿಸುವುದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಯನ್ನು ಅವಶ್ಯಕ್ರಮಕ್ಕಾಗಿ**

1. ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ.
2. ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ಇಲಾಖಾ ಇ–ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು ಮಾಹಿತಿಗಾಗಿ :

1. ಉಪನಿರ್ದೇಶಕರು (ಪರೀಕ್ಷೆ) ಪದವಿ ಪೂರ್ವ ಶಿಕ್ಷಣ ಇಲಾಖೆ
2. ಕಛೇರಿ ಪ್ರತಿ.